## ನಿಮ್ಮೊಡನೆ

# ಶಿಕ್ಷಣ ಹಕ್ಕು ಕಾಯಿದೆಗೆ ವಿರೋಧ

ಖಾಸಗಿ ಶಾಲೆಗಳಲ್ಲಿ ಶೇ.25ರಷ್ಟು ಸೀಟುಗಳನ್ನು ಆಯಾ ಶಾಲೆಗಳ ಸುತ್ತಮುತ್ತ ವಾಸಿಸುವ ದುರ್ಬಲ ಹಾಗೂ ಅವಕಾಶವಂಚಿತ ಮಕ್ಕಳಿಗೆ ಮೀಸಲಿಡಬೇಕು ಎಂಬ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಶಿಕ್ಷಣ ಹಕ್ಕು (ಕಡ್ಡಾಯ ಶಿಕ್ಷಣ) ಕಾಯಿದೆಗೆ ಅಪಸ್ವರ ಕೇಳಿಬಂದಿದೆ. ಬೆಂಗಳೂರಿನ ಕೆಲವು ಖಾಸಗಿ ಶಾಲೆಗಳ ಆಡಳಿತ ವರ್ಗ ಹಾಗೂ ಪಾಲಕರು ಕಾಯಿದೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಶಿಕ್ಷಣ ಹಕ್ಕು ಕಾಯಿದೆ ಜಾರಿಗೆ ಬಂದರೆ ದೇಶದ ಎಲ್ಲಾ ಖಾಸಗಿ ಶಾಲೆಗಳಲ್ಲಿ ಶೇಕಡಾ 25ರಷ್ಟು ಸೀಟುಗಳನ್ನು ಶಾಲೆಯ ಸುತ್ತಮುತ್ತಲ ಪ್ರದೇಶದ ದುರ್ಬಲ ವರ್ಗಗಳ ಮಕ್ಕಳಿಗೆ ಮೀಸಲಿಟ್ಟು ಅವರಿಗೆ ಉಚಿತವಾಗಿ ಶಿಕ್ಷಣ ನೀಡುವುದು ಕಡ್ಡಾಯವಾಗಲಿದೆ. ಈ ನಿಯಮಕ್ಕೆ ವಿರೋಧವಾಗಿರುವ ಶಾಲೆಗಳು ಅದನ್ನು ನೇರವಾಗಿ ಹೇಳದೆ ಮೀಸಲಾತಿ ವ್ಯವಸ್ಥೆ ಜಾರಿಗೆ ಬಂದರೆ ದುಷ್ಟ ಮಕ್ಕಳು ಪ್ರವೇಶ ಪಡೆದು ಶಾಲೆಯ ಶೈಕ್ಷಣಿಕ ಪರಿಸರವನ್ನೇ ಹಾಳು ಮಾಡುತ್ತಾರೆ ಎಂಬ ಆತಂಕವನ್ನು ಪಾಲಕರಲ್ಲಿ ಸೃಷ್ಟಿಸಲು ಹೊರಟಿವೆ. ಈ ಬೆಳವಣಿಗೆ ಅತ್ಯಂತ ದುರದೃಷ್ಟಕರ.

ಮೀಸಲಾತಿ ಸೌಲಭ್ಯ ಅಡಿಯಲ್ಲಿ ವಯೋಮಿತಿ ಮೀರಿದ ಮಕ್ಕಳಿಗೂ ಶಾಲೆಗೆ ಸೇರುವ ಅವಕಾಶ ಕೊಡಬೇಕು ಎಂಬ ನಿಯಮವಿದೆ. ಇಂಥ ಮಕ್ಕಳನ್ನು ಶಾಲೆಯ ಆಡಳಿತ ವಿನಾ ಕಾರಣ ವಜಾ ಮಾಡುವಂತಿಲ್ಲ. ಈ ನಿಯಮಗಳಿಂದ ಶೈಕ್ಷಣಿಕ ಪರಿಸರ ಹಾಳಾಗುತ್ತದೆ ಎಂಬ ಆತಂಕ ಸಹಜ. ಅದನ್ನು ಸರ್ಕಾರ ನಿವಾರಿಸಬೇಕು. ಅನುಚಿತವಾಗಿ ವರ್ತಿಸುವ ಮಕ್ಕಳನ್ನು ಸರಿಯಾದ ದಾರಿಯಲ್ಲಿ ತರುವ ಕೆಲಸವನ್ನೂ ಶಾಲೆಯ ಶಿಕ್ಷಕರೇ ಮಾಡಬೇಕು. ಅದು ಅವರ ಕರ್ತವ್ಯ.

ಶಿಕ್ಷಣ ಹಕ್ಕು ಕಾಯಿದೆಯ ಅಡಿಯಲ್ಲಿ ಪ್ರವೇಶ ಪಡೆಯುವ ಶೇಕಡಾ 25ರಷ್ಟು ಮಕ್ಕಳ ಶಿಕ್ಷಣ ವೆಚ್ಚವನ್ನು ತುಂಬಿಕೊಡುವುದಾಗಿ ಕೇಂದ್ರ ಸರ್ಕಾರ ಹೇಳುತ್ತಿದೆ. ರಾಜ್ಯ ಸರ್ಕಾರಗಳೂ ತಮ್ಮ ಪಾಲು ನೀಡಬೇಕಾದೀತು. ಆದರೆ ಅದನ್ನಿನ್ನೂ ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿಲ್ಲ. ಕಾಯಿದೆ ಜಾರಿಗೆ ಬಂದ ಮೇಲೆ ಸರ್ಕಾರ ಶೇಕಡಾ 25ರಷ್ಟು ವಿದ್ಯಾರ್ಥಿಗಳ ವೆಚ್ಚ ಭರಿಸದಿದ್ದರೆ ಶಾಲೆಗಳಿಗೆ ಹೊರೆಯಾಗಲಿದೆ. ಅದನ್ನು ತುಂಬಿಕೊಳ್ಳಲು ಇತರ ವಿದ್ಯಾರ್ಥಿಗಳಿಂದ ಹೆಚ್ಚು ಶುಲ್ಕ ಪಡೆಯಬೇಕಾದೀತು. ಈ ರಗಳೆಯೇ ಬೇಡ ಎಂದು ನಿರ್ಧರಿಸಿರುವ ಕೆಲ ಶಾಲೆಗಳು ಮೀಸಲಾತಿ ಸೌಲಭ್ಯ ಪಡೆದು ಶಾಲೆಗೆ ಸೇರುವ ಮಕ್ಕಳು ಪುಂಡಾಟಿಕೆ ಮಾಡುತ್ತಾರೆ. ವಿದ್ಯಾರ್ಥಿನಿಯರ ಜತೆಯಲ್ಲಿ ಅಸಭ್ಯವಾಗಿ ವರ್ತಿಸುತ್ತಾರೆ ಎಂಬ ಭೀತಿಯನ್ನು ಪಾಲಕರಲ್ಲಿ ಸೃಷ್ಟಿಸಿ ಅವರಿಂದ ಕಾಯಿದೆಗೆ ವಿರೋಧವಿದೆ ಎಂದು ಬಿಂಬಿಸಲು ಹೊರಟಿವೆ. ಕಾಯಿದೆ ಜಾರಿಗೆ ಬರದಂತೆ ತಡೆಯುವ ಹುನ್ನಾರ ಇದು. ಪಾಲಕರು ಕಾಯಿದೆಯ ಆಶಯವನ್ನು ಅರ್ಥ ಮಾಡಿಕೊಳ್ಳಬೇಕು.

ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿರುವ ಖಾಸಗಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ಈ ಶಾಲೆಗಳಿಗೆ ಸೇರುವ ಮಕ್ಕಳೆಲ್ಲ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಕುಟುಂಬಗಳಿಗೆ ಸೇರಿದವರು. ಬಡ ಕುಟುಂಬಗಳ, ದೈಹಿಕವಾಗಿ ದುರ್ಬಲರಾಗಿರುವ ಮತ್ತು ಸಕಾಲದಲ್ಲಿ ಶಾಲೆಗೆ ಸೇರುವ ಅವಕಾಶಗಳನ್ನು ತಪ್ಪಿಸಿಕೊಂಡ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದು ಸರ್ಕಾರದ ಆಶಯ. ಬಡತನದಿಂದಾಗಿ ಅಸಂಖ್ಯಾತ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅಂಥವರಲ್ಲಿ ಕೆಲವರಿಗಾದರೂ ಉತ್ತಮ ಶಿಕ್ಷಣ ಸಿಗಬೇಕು ಎನ್ನುವುದು ಸರ್ಕಾರದ ಕಾಳಜಿ.

ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಹಣ, ಭೂಮಿ ಮತ್ತಿತರ ರಿಯಾಯಿತಿಗಳನ್ನು ಪಡೆದುಕೊಂಡಿವೆ. ಬಹುತೇಕ ಶಾಲೆಗಳು ಶ್ರೀಮಂತರ ಮಕ್ಕಳಿಂದ ಭಾರೀ ಮೊತ್ತವನ್ನು ಶುಲ್ಕ ಹಾಗೂ ವಂತಿಗೆ ಪಡೆಯುತ್ತಿವೆ. ಅನೇಕ ಶಾಲೆಗಳು ಪ್ರತಿಭಾವಂತ ಬಡ ಹಾಗೂ ಅರ್ಹತೆ ಇರುವ ಮಕ್ಕಳಿಗೆ ಪ್ರವೇಶ ನಿರಾಕರಿಸುತ್ತಿವೆ. ಈ ಬೆಳವಣಿಗೆಗಳನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸರ್ಕಾರ ಕಡ್ಡಾಯ ಶಿಕ್ಷಣ ಕಾಯಿದೆ ಜಾರಿಗೆ ತರಲು ಹೊರಟಿದೆ. ಎಲ್ಲ ವರ್ಗಗಳ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಮತ್ತು ಸಮಾನ ಅವಕಾಶಗಳು, ಗೌರವದ ಬದುಕು ಸಿಗಬೇಕು ಎಂಬುದು ಪ್ರಜಾಪ್ರಭುತ್ವದ ಆಶಯ. ಅದು ಸಾಕಾರಗೊಳ್ಳಬೇಕಾದರೆ ಉಳ್ಳವರು ಉದಾರಿಗಳಾಗಬೇಕಾಗುತ್ತದೆ. ಬಡವರ ಮಕ್ಕಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಭಾರತೀಯ ಸಮಾಜವೇ ತಾರತಮ್ಯದಿಂದ ಕೂಡಿದೆ. ಸಾಧ್ಯವಾದಷ್ಟೂ ತಾರತಮ್ಯದ ಗೋಡೆಗಳನ್ನು ನಾಶ ಮಾಡಬೇಕು. ಪ್ರತಿಯೊಬ್ಬರೂ ಅದಕ್ಕೆ ಸಹಕರಿಸಬೇಕು. ಈ ಕಾಯಿದೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲೇ ಅದಕ್ಕೆ ವಿರೋಧ ವ್ಯಕ್ತಪಡಿಸುವುದು ಸಮರ್ಥನೀಯ ಅಲ್ಲ. ಕಾಯ್ದೆಯಲ್ಲಿರುವ ದೋಷಗಳ ಬಗ್ಗೆ ಮುಕ್ತ ಚರ್ಚೆ ನಡೆಸಿ, ದೋಷಗಳನ್ನು ನಿವಾರಿಸಿ, ಕಾಯ್ದೆ ಜಾರಿಗೆ ಶಾಲಾ ಆಡಳಿತಗಳೂ ನೆರವಾಗುವುದು ಒಳ್ಳೆಯದು.

■ ಪಿ.ಕೆ. ಹರಿಯಬ್ಬೆ

ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಹಣ, ಭೂಮಿ ಮತ್ತಿತರ ರಿಯಾಯಿತಿಗಳನ್ನು ಪಡೆದುಕೊಂಡಿವೆ. ಬಹುತೇಕ ಶಾಲೆಗಳು ಶ್ರೀಮಂತರ ಮಕ್ಕಳಿಂದ ಭಾರೀ ಮೊತ್ತವನ್ನು ಶುಲ್ಕ ಹಾಗೂ ವಂತಿಗೆ ಪಡೆಯುತ್ತಿವೆ. ಅನೇಕ ಶಾಲೆಗಳು ಪ್ರತಿಭಾವಂತ ಬಡ ಹಾಗೂ ಅರ್ಹತೆ ಇರುವ ಮಕ್ಕಳಿಗೆ ಪ್ರವೇಶ ನಿರಾಕರಿಸುತ್ತಿವೆ. ಈ ಬೆಳವಣಿಗೆಗಳನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸರ್ಕಾರ ಕಡ್ಡಾಯ ಶಿಕ್ಷಣ ಕಾಯಿದೆ ಜಾರಿಗೆ ತರಲು ಹೊರಟಿದೆ. ಎಲ್ಲ ವರ್ಗಗಳ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಮತ್ತು ಸಮಾನ ಅವಕಾಶಗಳು, ಗೌರವದ ಬದುಕು ಸಿಗಬೇಕು ಎಂಬುದು ಪ್ರಜಾಪ್ರಭುತ್ವದ ಆಶಯ.

